<u>ದಿನಾಂಕಃ 09-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ- 1 ರಿಂದ 3 ನೇ ಪ್ರತಿವಾದಿ ಪರ ವಕೀಲರಿಂದಃ-</u>

ನಾನು 2015 ನೇ ಇಸವಿಯ ಸಾಲಿನಲ್ಲಿ 1 ನೇ ಪ್ರತಿವಾದಿ ಸಂಸ್ಥೆಯ ಕಾರ್ಯದರ್ಶಿ ಆಗಿದ್ದೆನು. ನನ್ನನ್ನು ದಿಃ20.02.2021 ರಂದು ಸದರಿ ಹುದ್ದೆಯಿಂದ ಬಿಡುಗಡೆ ಮಾಡಲಾಗಿತ್ತು. ನಾನು Master in Sociology, Master in Journalism, PG in Human Resources Management, Bachelor of Philosophy, Bachelor of Theology ಓದಿರುತ್ತೇನೆ. ನನಗೆ ನೊಂದಾಯಿತ ಸಂಸ್ಥೆಯ ಸಂಪೂರ್ಣ ವ್ಯವಹಾರದ ಬಗ್ಗೆ ಜ್ಞಾನ ಇರುತ್ತದೆ. 1 ನೇ ಪ್ರತಿವಾದಿ ಸಂಸ್ಥೆ ನೊಂದಾಯಿತ ಸಂಸ್ಥೆ ಎಂದರೆ ಸರಿ. ಅದಕ್ಕೆ ಪ್ರತ್ಯೇಕವಾದ ಬೈಲಾ ಇರುತ್ತದೆ ಎಂದರೆ ಸರಿ. ಸದರಿ ಸಂಸ್ಥೆಯು ನಿರ್ದಿಷ್ಟವಾಗಿ ಯಾವ ದಿನಾಂಕ ಹಾಗೂ ಇಸವಿಯಂದು ಪ್ರಾರಂಭವಾಗಿರುತ್ತದೆ ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ಆದರೆ, 1960 ರ Karnataka Society Registration Act ಪ್ರಕಾರ ನೊಂದಾಯಿತ ಬೈಲಾ ಇರುತ್ತದೆ.

1 ನೇ ಪ್ರತಿವಾದಿ ಸಂಸ್ಥೆ ಚಿಕ್ಕಮಗಳೂರು ಪ್ರಾಂತ್ಯ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಸರಿ. ಸದರಿ ಚಿಕ್ಕಮಗಳೂರು ಪ್ರಾಂತ್ಯ ವ್ಯಾಪ್ತಿಯಲ್ಲಿ ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆಯ ಎಲ್ಲಾ ಕ್ಯಾಥೋಲಿಕ್ ಚರ್ಚ್ ಗಳು ಬರುತ್ತವೆ. ಸದರಿ ಎರಡೂ ಜಿಲ್ಲೆಯ ಚರ್ಚ್ ಗಳ ಮುಖ್ಯಸ್ಥರು ಚಿಕ್ಕಮಗಳೂರಿನ ಬಿಷಪ್ ಇರುತ್ತಾರೆ ಎಂದರೆ ಸರಿ. ಚಿಕ್ಕಮಗಳೂರಿನ ಬಿಷಪ್ ರವರನ್ನು ರೋಂ ನ

ಪೋಪ್ ರವರು ನೇಮಕ ಮಾಡುತ್ತಾರೆ ಎಂದರೆ ಸರಿ. ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆಯಲ್ಲಿ ಬರುವಂತಹ ಚರ್ಚ್ ಗಳಿಗೆ ಸಂಬಂಧಪಟ್ಟಂತಹ ಆಸ್ತಿಗಳು ಹಾಗೂ ಧಾರ್ಮಿಕ ವ್ಯವಹಾರಗಳಿಗೆ ಪೋಪ್ ರವರು ಪರಮಾಧಿಕಾರ ಹೊಂದಿರುತ್ತಾರೆ ಎಂದರೆ ಸರಿ.

ನನ್ನ ಕಾರ್ಯದರ್ಶಿ ಹುದ್ದೆಯ ಅಧಿಕಾರ ಅವಧಿಯಲ್ಲಿ ಎಲ್ಲಾ ರಿಜಿಸ್ಟರ್ ಗಳನ್ನು, ಲೆಕ್ಕಪುಸ್ತಕಗಳನ್ನು, ರೆಸಲ್ಯೂಷನ್ ಹಾಗೂ ಮಿನಿಟ್ಸ್ ಪುಸ್ತಕಗಳನ್ನು ಇಟ್ಟುಕೊಳ್ಳುವಂತಹ ಹಾಗೂ ನೋಡಿಕೊಳ್ಳುವಂತಹ ಅಧಿಕಾರ ನನಗೆ ಮಾತ್ರ ಇತ್ತು ಎಂದರೆ ಸರಿ. ಸದರಿ ಪುಸ್ತಕಗಳನ್ನು ನಿರ್ವಹಣೆ ನಾನೇ ಮಾಡುತ್ತಿದ್ದೆನು ಎಂದರೆ ಸರಿ. 1 ನೇ ಪ್ರತಿವಾದಿ ಸಂಸ್ಥೆಯಲ್ಲಿ ಒಂದು ಗವರ್ನಿಂಗ್ ಬಾಡಿ ಹಾಗೂ ಇನ್ನೊಂದು ಜನರಲ್ ಬಾಡಿ ಇರುತ್ತದೆ ಎಂದರೆ ಸರಿ. ದೈನಂದಿನ ಚಟುವಟಿಕೆಗಳನ್ನು ನಿರ್ವಹಿಸಿಕೊಂಡು ಹೋಗಲು ಗವರ್ನಿಂಗ್ ಬಾಡಿ ಇರುತ್ತದೆ ಎಂದರೆ ಸರಿ. ಸದರಿ ಗವರ್ನಿಂಗ್ ಬಾಡಿಗಿಂತ ಹೆಚ್ಚಿನ ಅಧಿಕಾರ ಜನರಲ್ ಬಾಡಿ ಗೆ ಇರುತ್ತದೆ ಎಂದರೆ ಸರಿ. ಜನರಲ್ ಬಾಡಿ ಸದಸ್ಯರು ಗವರ್ನಿಂಗ್ ಬಾಡಿಯ ಸದಸ್ಯರನ್ನು ನೇಮಕ ಮಾಡುತ್ತಾರೆ ಎಂದರೆ ಸರಿ. ಸದರಿ ಸೊಸೈಟಿಯ ವ್ಯವಹಾರಗಳು ಯಾವ ರೀತಿ ನಡೆಯಬೇಕು ಎನ್ನುವ ಬಗ್ಗೆ ಬೈಲಾದಲ್ಲಿ ನಿಯಮಾವಳಿಗಳನ್ನು ರೂಪಿಸುತ್ತಾರೆ ಎಂದರೆ ಸರಿ.

1 ನೇ ಪ್ರತಿವಾದಿ ಸಂಸ್ಥೆಗೆ ಸಂಬಂಧಪಟ್ಟ ಯಾವುದೇ ಮೀಟಿಂಗ್ ಗಳನ್ನು ನಡೆಸುವ ಪೂರ್ವದಲ್ಲಿ ಸಂಸ್ಥೆಯ ಅಧ್ಯಕ್ಷರ ಜೊತೆಗೆ ಚರ್ಚಿಸಿ ಅವರ ಒಪ್ಪಿಗೆಯನ್ನು ಪಡೆದು ನಂತರ ಮೀಟಿಂಗ್ ನಡೆಸಬೇಕು. 2 ನೇ ಪ್ರತಿವಾದಿ 1 ನೇ ಪ್ರತಿವಾದಿ ಸಂಸ್ಥೆಯ ಅಧ್ಯಕ್ಷರು ಎಂದರೆ ಸರಿ. ಸದರಿ ಮೀಟಿಂಗ್ ಗಳು

ಗವರ್ನಿಂಗ್ ಬಾಡಿ ಗೆ ಸಂಬಂಧಪಟ್ಟಿದ್ದಲ್ಲಿ ಗವರ್ನಿಂಗ್ ಬಾಡಿ ಯ ಸದಸ್ಯರಿಗೆ ನೋಟೀಸ್ ಅನ್ನು ನೀಡಬೇಕು ಹಾಗೂ ಜನರಲ್ ಬಾಡಿ ಗೆ ಸಂಬಂಧಪಟ್ಟಿದ್ದಲ್ಲಿ ಜನರಲ್ ಬಾಡಿ ಯ ಸದಸ್ಯರಿಗೆ ನೋಟೀಸ್ ಅನ್ನು ನೀಡಬೇಕು ಎಂದರೆ ಸರಿ. ವಿವಿಧ ಕ್ಷೇತ್ರದಲ್ಲಿ ಇದ್ದ ವಿಶೇಷವಾಗಿ ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಅನುಭವ ಇದ್ದಂತಹ ವ್ಯಕ್ತಿಗಳನ್ನು ಹಾಗೂ ಸಂಸ್ಥೆಗೆ ದೇಣಿಗೆ ಕೊಡುವಂತಹ ಹಾಗೂ ಇತರ ರೀತಿಯಲ್ಲಿ ಸಹಾಯ  ಮಾಡುವಂತಹ ವ್ಯಕ್ತಿಗಳ ಲಿಸ್ಟ್ ತಯಾರಿಸಿ ಗವರ್ನಿಂಗ್ ಬಾಡಿ ಗೆ ಸಲ್ಲಿಸಿ ನಂತರ ಅವರ ಒಪ್ಪಿಗೆಯನ್ನು ಪಡೆದು ಜನರಲ್ ಬಾಡಿ ಗೆ ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳುತ್ತೇವೆ. 1 ನೇ ಪ್ರತಿವಾದಿಯ ಸಂಸ್ಥೆಯಲ್ಲಿ ಗವರ್ನಿಂಗ್ ಬಾಡಿ ಯಲ್ಲಿ ಒಟ್ಟು 8 ಜನ ಸದಸ್ಯರು ಇದ್ದರು. ಅವರು 2 ನೇ ಪ್ರತಿವಾದಿ ಹಾಗೂ 1 ಮತ್ತು 2 ನೇ ವಾದಿ ಹಾಗೂ 4 ರಿಂದ 7 ನೇ ವಾದಿ ಹಾಗೂ ನಾನು ಇರುತ್ತೇವೆ. ಅಧ್ಯಕ್ಷರ ಆದೇಶದ ಮೇರೆಗೆ ನಾನು ಹಾಗೂ 1, 2, 4 ರಿಂದ 7 ನೇ ವಾದಿ ಹಾಗೂ 2 ನೇ ಪ್ರತಿವಾದಿ ನೇಮಕಗೊಂಡಿರುತ್ತೇವೆ.

ಬೈಲಾ ದಲ್ಲಿ ಯಾವುದಾದರೂ ತಿದ್ದುಪಡಿ ಅಥವಾ ಹೊಸ ನಿಯಮಾವಳಿಗಳನ್ನು ಸೇರ್ಪಡೆ ಮಾಡುವುದಿದ್ದಲ್ಲಿ ಅಜೆಂಡಾ ತಯಾರಿಸಿ ಅದಕ್ಕೆ ಪ್ರತ್ಯೇಕ ತಿಳುವಳಿಕೆಯನ್ನು ಎಲ್ಲಾ ಸದಸ್ಯರಿಗೆ ನೀಡಬೇಕು ಎಂದರೆ ಸರಿ. ಸದರಿ ಅಜೆಂಡಾ ದಲ್ಲಿ ಯಾವ ನಿಯಮಗಳನ್ನು ತಿದ್ದುಪಡಿ ಮಾಡಬೇಕು ಅಥವಾ ಯಾವ ಹೊಸ ನಿಯಮಗಳನ್ನು ಸೇರ್ಪಡೆ ಮಾಡಬೇಕು ಎಂದು ನಮೂದು ಮಾಡಬೇಕು ಎಂದರೆ ಸರಿ. ಸದರಿ ಅಜೆಂಡಾ ಮತ್ತು ತಿಳುವಳಿಕೆಯನ್ನು ಸದಸ್ಯರಿಗೆ ಜಾರಿ ಮಾಡಿದ ಬಗ್ಗೆ ನಾನು ಸ್ವಿಕೃತಿಯನ್ನು ಪಡೆಯಬೇಕು ಎಂದರೆ ಸರಿ. ಸದರಿ ತಿಳುವಳಿಕೆಯನ್ನು ಮತ್ತು ಅಜೆಂಡಾವನ್ನು ವೈಯಕ್ತಿಕವಾಗಿ ಅಥವಾ

ಪೋಸ್ಟ್ ಮೂಲಕ ಜಾರಿ ಮಾಡುವ ವ್ಯವಸ್ಥೆ ಇರುತ್ತದೆ. ದಿಃ18.12.2020 ರ ಮೀಟಿಂಗ್ ನ ಅಜೆಂಡಾ ಹಾಗೂ ನೋಟೀಸ್ ಅನ್ನು ನಾನು ಸದಸ್ಯರಿಗೆ ವೈಯಕ್ತಿಕವಾಗಿ ಅಥವಾ ಪೋಸ್ಟ್ ಮೂಲಕ ಜಾರಿ ಮಾಡಿರುತ್ತೇನೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ಯಾವ ಮೂಲಕ ಜಾರಿ ಮಾಡಿರುತ್ತೇನೆ ಎಂದು ನಿರ್ದಿಷ್ಟವಾಗಿ ನನಗೆ ಹೇಳಲು ನೆನಪಿಲ್ಲ ಎಂದು ನುಡಿಯುತ್ತಾರೆ. ದಿಃ18.12.2020 ರ ಮೀಟಿಂಗ್ ನಲ್ಲಿ ಆದ ರೆಸೆಲ್ಯೂಷನ್ ಗಳು ಜನರಲ್ ಬಾಡಿ ಹಾಗೂ ಗವರ್ನಿಂಗ್ ಬಾಡಿ ಯಲ್ಲಿ ಆಗಿರುತ್ತದೆ. ರೆಸೆಲ್ಯೂಷನ್ ಮಾಡುವ ಪೂರ್ವದಲ್ಲಿ ವಿಷಯಗಳನ್ನು ಚರ್ಚಿಸಿ ಮಂಡನೆಗೆ ಇಡಬೇಕು ಎಂದರೆ ಸರಿ. ಸದರಿ ಮಂಡನೆ ಮಾಡುವಂತಹ ಅಧಿಕಾರ ಕಾರ್ಯದರ್ಶಿಯ ಕಾರ್ಯ ವ್ಯಾಪ್ತಿಗೆ ಬರುತ್ತದೆ ಎಂದರೆ ಸಾಕ್ಷಿದಾರರು ಕಾರ್ಯದರ್ಶಿಯ ಜೊತೆಗೆ ಇತರ ಸದಸ್ಯರಿಗೂ ಅವಕಾಶ ಇರುತ್ತದೆ ಎಂದು ನುಡಿಯುತ್ತಾರೆ. ಅಜೆಂಡಾವನ್ನು ಸಾಮಾನ್ಯವಾಗಿ ಕಾರ್ಯದರ್ಶಿ ಮಾಡಿ ಕಳುಹಿಸುತ್ತಾರೆ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ಅದಕ್ಕೆ ಏನಾದರೂ ಸೇರ್ಪಡೆ ಇದ್ದರೆ ಸದಸ್ಯರೂ ಕೂಡಾ ಬರವಣಿಗೆ ಮೂಲಕ ಕಳುಹಿಸುತ್ತಾರೆ. ಮೀಟಿಂಗ್ ನಲ್ಲಿ ಚರ್ಚಿಸಲಾದ ಅಂಶಗಳನ್ನು ಕಾರ್ಯದರ್ಶಿಯಾದ ನಾನು ಸಂಕ್ಷಿಪ್ತವಾದ ಮಿನಿಟ್ ಬುಕ್ ನಲ್ಲಿ ನಮೂದು ಮಾಡಬೇಕು ಎಂದರೆ ಸರಿ. ಸದರಿ ಮಿನಿಟ್ ಬುಕ್ ನಲ್ಲಿ ನಮೂದು ಮಾಡುವ ಪೂರ್ವದಲ್ಲಿ ನಾನು ಪ್ರತ್ಯೇಕ ಹಾಳೆಯಲ್ಲಿ ಅದನ್ನು ನೋಟ್ ಮಾಡುತ್ತೇನೆ ಎಂದರೆ ಸರಿ. ಸದರಿ ಮೀಟಿಂಗ್ ನಲ್ಲಿ ಆದಂತಹ ರೆಸೆಲ್ಯೂಷನ್ ಗಳನ್ನು ಕೆಲವು ಬಾರಿ ಆ ಕೂಡಲೇ ರೆಸೆಲ್ಯೂಷನ್ ಬುಕ್ ನಲ್ಲಿ ಬರೆದು ಸಹಿಯನ್ನು ಪಡೆಯುತ್ತೇವೆ. ರೆಸೆಲ್ಯೂಷನ್ ಪಾಸ್ ಆದ

ನಂತರ ಮುಂದಿನ ಮೀಟಿಂಗ್ ನಲ್ಲಿ ಸದರಿ  ಪೂರ್ಣ ಸಭಾ ನಡವಳಿಗಳನ್ನು ಓದಿ ಹೇಳಿ ಅನುಮೋದನೆ ಪಡೆದುಕೊಳ್ಳುತ್ತೇವೆ ಎಂದರೆ ಸರಿ. ಸದರಿ ಮಿನಿಟ್ಸ್ ಬುಕ್ ನಲ್ಲಿ ನಮೂದು  ಮಾಡುವ ಅಂಶಗಳು ಹಾಗೂ ರೆಸೆಲ್ಯೂಷನ್ ಬುಕ್ ನಲ್ಲಿ ನಮೂದು ಮಾಡುವ ಅಂಶಗಳು ಅನುಕ್ರಮವಾಗಿ ಇರಬೇಕು ಎಂದರೆ ಸರಿ. ಮೊದಲು ಆದಂತಹ ರೆಸೆಲ್ಯೂಷನ್ ಮೊದಲು ಬರಬೇಕು ಹಾಗೂ ನಂತರ ಆದಂತಹ ರೆಸೆಲ್ಯೂಷನ್ ನಂತರ ದಿನಾಂಕದ ಪ್ರಕಾರ ಬರಬೇಕು ಎಂದರೆ ಸರಿ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ಕೆಲವೊಂದು ಬಾರಿ ಸರ್ಕಾರದಿಂದ ನಿಗದಿತ ದಿನಾಂಕದ ಒಳಗಡೆ ಅಗತ್ಯದ ರೆಸೆಲ್ಯೂಷನ್ ಬೇಕಾಗಿದ್ದಲ್ಲಿ ಫೋನ್ ಮೂಲಕ ಸದಸ್ಯರಿಗೆ ತಿಳಿಸಿ ರೆಸೆಲ್ಯೂಷನ್ ಪಾಸ್ ಮಾಡಿ ರೆಸೆಲ್ಯೂಷನ್ ಪುಸ್ತಕದಲ್ಲಿ ನಮೂದು ಮಾಡಿ ನೀಡಲಾಗುತ್ತದೆ.

(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ

ಓ.ಎಸ್.ನಂಃ 27/2021
ಪಿ.ಡಬ್ಲ್ಯೂಃ 1